# ಕನ್ನಡ ಪೋಸ್ಟ್

ಇದು ಸುದ್ದಿ ವಿಳಾಸ

KANNADA POST

ಕನ್ನಡ ದಿನ ಪತ್ರಿಕೆ Kannada Daily

ಸಂಪಾದಕ : ಮಂಜು ಬನವಾಸೆ

ಹಾಸನ | E-mail : kannadapostnews@gmail.com | / ಕನ್ನಡ post | Price: ₹1

Vol.No.01 | Issue. 154 | Pages. 2 | Date: 22-04-2025, TUESDAY | RNI NO: KARKAN/2024/89601

ಸಂಪುಟ : 01 - ಸಂಚಿಕೆ : 154 - ಪುಟಗಳು : 2 - 22 ಏಪ್ರಿಲ್ 2025 ಮಂಗಳವಾರ | Ph: 8762954248 | ದರ : ₹1


# ಜನಿವಾರ ಪ್ರಕರಣ: ಬೃಹತ್ ಪ್ರತಿಭಟನೆ

## ಅರಕಲಗೂಡಿನಲ್ಲಿ ಬೀದಿಗಿಳಿದ ಬ್ರಾಹ್ಮಣ ಸಮಾಜ | ಅರೆಮಾದನಹಳ್ಳಿ ಶ್ರೀ ಬೆಂಬಲ-ಭಾಗಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರಕಲಗೂಡು: ಸಿಇಟಿ ಪರೀಕ್ಷೆ ವೇಳೆ ವಿದ್ಯಾರ್ಥಿಗಳಿಂದ ಜನಿವಾರ ತೆಗೆಸಿದ ಪ್ರಕರಣ ಖಂಡಿಸಿ ಪಟ್ಟಣದಲ್ಲಿ ಬೃಹತ್ ಪ್ರತಿಭಟನೆ ನಡೆಯಿತು.

ತಾಲೂಕಿನ ವಿವಿಧೆಡೆಗಳಿಂದ ಆಗಮಿಸಿದ್ದ ಬ್ರಾಹ್ಮಣ, ವಿಶ್ವಕರ್ಮ, ಆರ್ಯ ವೈಶ್ಯ, ದೇವಾಂಗ ಸೇರಿ ವಿವಿಧ ಸಮುದಾಯದವರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಪಟ್ಟಣದ ಕೋದಂಡರಾಮಸ್ವಾಮಿ ದೇವಾಲಯ ಆವರಣದಲ್ಲಿ ತಾಲೂಕಿನ ವಿವಿಧೆಡೆಗಳಿಂದ ಆಗಮಿಸಿದ್ದ ಪ್ರತಿಭಟನಾಕಾರರು ಸಮಾವೇಶಗೊಂಡು, ದೊಡ್ಡಮ್ಮ ದೇವಿ ದೇವಾಲಯ ವೃತ್ತದ ಮೂಲಕ ಅ.ನ.ಕೃ ವೃತ್ತದಲ್ಲಿ ಸೇರಿ ಮಾನವ ಸರಪಳಿ ನಿರ್ಮಿಸಿ, ಕೆಲಕಾಲ ರಸ್ತೆತಡೆ ಮಾಡಿದರು.

ನಂತರ ಕೋಟೆ ದೊಡ್ಡಮ್ಮ ದೇವಿ ದೇವಾಲಯ ವೃತ್ತದಲ್ಲಿ ಮಾನವ ಸರಪಳಿ ನಿರ್ಮಿಸಿದರು.ಇದರಿಂದ ನೂರಾರು ವಾಹನಗಳು ರಸ್ತೆಯಲ್ಲಿ ನಿಲ್ಲುವಂತಾಯಿತು.



ನಂತರ ಪ್ರತಿಭಟನಾಕಾರರು ತಾಲೂಕು ಕಚೇರಿಗೆ ತೆರಳಿ ಕೆಲಕಾಲ ಧರಣಿ ಕುಳಿತರು. ಯಜ್ಞೋಪವೀತ ಧಾರಿಗಳಿಗೆ ಮಾಡಿರುವ ಅವಮಾನ ಭಾರತೀಯ ಸಂಸ್ಕೃತಿಯ ಮೇಲೆ ಮಾಡಿರುವ ದೌರ್ಜನ್ಯ ವಾಗಿದೆ.ಇದನ್ನು ಸಹಿಸಲು ಸಾಧ್ಯವಿಲ್ಲ ಎಂದು ಪ್ರತಿಭಟನಾಕಾರರು ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಭಟನಾಕಾರರನ್ನು ಉದ್ದೇಶಿಸಿ ತಾಲ್ಲೂಕು ಬ್ರಾಹ್ಮಣ ಮಹಾಸಭಾ ಅಧ್ಯಕ್ಷ ಶ್ರೀನಿವಾಸಮೂರ್ತಿ, ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ನಂಜುಂಡಸ್ವಾಮಿ, ಹಿರಿಯ ವಕೀಲರಾದ ಎ.ಆರ್.ಜನಾರ್ಧನ ಗುಪ್ತ ಮಾತನಾಡಿದರು.

ಅರೇಮಾದನಹಳ್ಳಿ ಶ್ರೀ ವಿಶ್ವಕರ್ಮ ಮೂಲಮಠದ ಶ್ರೀ ಗುರು ಶಿವಸುಜ್ಞಾನ ಮೂರ್ತಿ ಸ್ವಾಮಿಗಳು ಮಾತನಾಡಿ,ಯಜ್ಞೋಪವೀತದ ಮಹತ್ವದ ಅರಿವು ಇಲ್ಲದವರ ಕುಕೃತ್ಯ ಇದೆಂದು ಭಾವಿಸಲಾಗದು. ಇದರ ಹಿಂದೆ ದಮನಕಾರಿ ಚಿಂತನೆ ಇರುವಂತಿದೆ. ಇದರಿಂದ ಹಿಂದೂ ಧರ್ಮವನ್ನು ದಮನಗೊಳಿಸಬಹುದೆಂಬ ದುಷ್ಟ ಚಿಂತನೆ ಅಡಗಿರುವಂತಿದೆ. ಸರ್ಕಾರ ಇಂತಹ ಕುಕೃತ್ಯ ನಡೆಸಿದವರ ಬಗ್ಗೆ ಕಠಿಣ ಕ್ರಮ ಕೈಗೊಳ್ಳಬೇಕು.ಹಾಗಾದಾಗ ಮಾತ್ರ ಸರ್ಕಾರ ಸಂವಿಧಾನದ ಆಶಯವನ್ನು ಗೌರವಿಸುತ್ತಿದೆ ಎಂದು ಭಾವಿಸಬಹುದೆಂದು ಭಾವಿಸಬಹುದಾಗಿದೆ ಎಂದರು.

ನಿಕಟಪೂರ್ವ ಅಧ್ಯಕ್ಷ ಕೆ.ಎಸ್. ವಾಸುದೇವ, ಕಾರ್ಯದರ್ಶಿ ದೇವಕಿ ಚಂದ್ರಶೇಖರ, ನಿಕಟಪೂರ್ವ ಕಾರ್ಯದರ್ಶಿ ಕೆ.ಎಸ್.ವಕೀಲರಾದ ಪಿ.ಎಸ್.ಪ್ರಸಾದ್, ಶ್ರೀ ವತ್ಸ , ಗ್ರಾಮ ಪಂಚಾಯಿತಿ ಸದಸ್ಯೆ ಪುಷ್ಪ, ನರಸಿಂಹ ಮೂರ್ತಿ,ಆಡಿಟರ್ ಚಿದಂಬರ ಬಾಬು, ಕಾರೊನೇಷನ್ ಸಹಕಾರ ಸಂಘದ ನಿರ್ದೇಶಕಿ ಉಮಾ ಚಂದ್ರಶೇಖರ್,ವಿಪ್ರ ಮಹಿಳಾ ಬಳಗದ ಅಧ್ಯಕ್ಷೆ ರುಕ್ಮಿಣಿ, ಕಾರ್ಯದರ್ಶಿ ಸುಧಾ ರಮೇಶ್,ಖಜಾಂಚಿ ಸವಿತಾ ಶ್ರೀಧರ್, ಆರ್ಯ ವೈಶ್ಯ ಮಹಾಸಭಾ ಅಧ್ಯಕ್ಷ ರಂಗನಾಥ್,ಎ.ಎನ್.ರಮೇಶ್,

ಜಿ.ಪಂ ಮಾಜಿ ಸದಸ್ಯ ನಂಜುಂಡಸ್ವಾಮಿ, ಶ್ರೀನಿವಾಸ್ ಮೂರ್ತಿ, ವೆಂಕಟೇಶ್ ಮಲ್ಲಿಪಟ್ಟಣ, ಹಿರಣ್ಣಯ್ಯ, ಕಣಿಯಾರ್ ಗುರು, ಬಾಲಾಜಿ ಇತರರಿದ್ದರು.

# ಕನಕ ಪತ್ತಿನ ಸಹಕಾರ ಸಂಘದ ನೂತನ ಕಟ್ಟಡಕ್ಕೆ ಶಂಕು ಸ್ಥಾಪನೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ನಗರದ ರಿಂಗ್ ರಸ್ತೆಯ ಪುಷ್ಪಗಿರಿ ಬಡಾವಣೆಯ 7ನೇ ಅಡ್ಡರಸ್ತೆಯಲ್ಲಿ ನಿರ್ಮಾಣ ಮಾಡಲು ಉದ್ದೇಶಿಸಿರುವ ಕನಕ ಪತ್ತಿನ ಸಹಕಾರ ಸಂಘದ ನೂತನ ಕಟ್ಟಡಕ್ಕೆ ಸ್ಥಳೀಯ ಶಾಸಕ ಹೆಚ್.ಪಿ.ಸ್ವರೂಪ್ ಪ್ರಕಾಶ್ ಭಾನುವಾರ ಶಂಕುಸ್ಥಾಪನೆ ನೆರವೇರಿಸಿದರು.

ನಂತರ ಮಾತನಾಡಿದ ಶಾಸಕರು, ಅಷ್ಟೋ ಇಷ್ಟೋ ಹಣ ಉಳಿತಾಯ ಮತ್ತು ಸಮುದಾಯದ ಸದಸ್ಯರ ಆರ್ಥಿಕ ಬಲವರ್ಧನೆ ಉದ್ದೇಶದಿಂದ ಕನಕ ಪತ್ತಿನ ಸಹಕಾರ ಸಂಘ ಆರಂಭಿಸುತ್ತಿರುವುದು ಒಳ್ಳೆಯ ಬೆಳವಣಿಗೆ ಎಂದರು. ಉದ್ದೇಶಿತ ಕಟ್ಟಡ ನಿರ್ಮಾಣಕ್ಕೆ ಅಗತ್ಯವಿರುವ ಸುಮಾರು 30 ಲಕ್ಷ ರೂ.ಗಳನ್ನು ತಾವೇ ಶಾಸಕರ ನಿಧಿ ಅಥವಾ ಇತರೆ ಮೂಲಗಳಿಂದ ಭರಿಸಿ ಹೊಸ ನಿರ್ಮಾಣ ನಿರ್ಮಿಸಿಕೊಡುವುದಾಗಿ ಭರವಸೆ ನೀಡಿದರು.



ಇದಕ್ಕೆ ಕಾರ್ಯಕ್ರಮದಲ್ಲಿದ್ದ ಪ್ರತಿಯೊಬ್ಬರು ಚಪ್ಪಾಳೆ ತಟ್ಟುವ ಮೂಲಕ ಧನ್ಯವಾದ ಹೇಳಿದರು. ಕನಕ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಸಂತೋಷ, ಉಪಾಧ್ಯಕ್ಷ ಲಿಂಗರಾಜು, ನಿರ್ದೇಶಕರಾದ ಗೀತಾ-ತಾರೇಶ್ ದಂಪತಿ ಶಂಕುಸ್ಥಾಪನೆ ಪೂಜಾ ಕಾರ್ಯಕ್ರಮ ನೆರವೇರಿಸಿದರು.

ಈ ಸಂದರ್ಭದಲ್ಲಿ ದೇವರಾಜು ಅರಸು ನಿಗಮದ ವ್ಯವಸ್ಥಾಪಕ ನಿರ್ದೇಶಕ ಕಾಂತರಾಜು, ಕರ್ನಾಟಕ ಪ್ರದೇಶ ಕುರುಬರ ಸಂಘದ ರಾಜ್ಯ ಉಪಾಧ್ಯಕ್ಷ ಕೆ.ಬಿ.ಕೇಶವಮೂರ್ತಿ, ಮಂಗಳಾಪುರ ನಾಗರಾಜು, ದಿವಾಕರ ಗೌಡ, ಚೋಳೇನಳ್ಳಿ ಸುರೇಶ್, ಕೋಮಲೇಶ್, ವಕೀಲರಾದ ಪುಟ್ಟರಾಜು, ನವಿಲೆ ಅಣ್ಣಪ್ಪ ಹಾಗೂ ಬನವಾಸೆ ಸತೀಶ್, ಮಕಾನ್ ಸತೀಶ್, ವಿನೋದ್ ಹಾಗೂ ಸಹಕಾರ ಸಂಘದ ಆಡಳಿತ ಮಂಡಳಿ ಸದಸ್ಯರು ಮತ್ತು ನೌಕರ ವರ್ಗ ಹಾಗೂ ಸಮಾಜದ ಬಂಧುಗಳು, ಜೆ.ಸಿ.ಬಿ ಚಂದ್ರು ಹಾಗೂ ಇತರೆ ಸಮಾಜದ ಬಂಧುಗಳು ಭಾಗವಹಿಸಿದ್ದರು.

# ಜಾತಿ ಜನ ಗಣತಿ: ಉಪಜಾತಿ ಹೆಸರು ನಮೂದಿಸಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಒಳ ಮೀಸಲಾತಿ ಜಾರಿಗಾಗಿ ದತ್ತಾಂಶ ಸಂಗ್ರಹ ಆಯೋಗವು ಅಗತ್ಯ ಗಣತಿದಾರರನ್ನು ನೇಮಕ ಮಾಡಿಕೊಳ್ಳುತ್ತಿದ್ದು, ಗಣತಿದಾರರು ಪರಿಶಿಷ್ಟ ಜಾತಿಯ(101 ಜಾತಿ) ಮನೆಗಳಿಗೆ ಬಂದಾಗ ಕುಟುಂಬ ಸದಸ್ಯರು ನಿಖರವಾಗಿ ತಮ್ಮ ಉಪಜಾತಿಗಳನ್ನು ಹೇಳಬೇಕು ಎಂದು ಹೊಲೆಯ-ಮಾದಿಗ ಸಂಘಟನೆಗಳ ಸಮನ್ವಯ ಸಮಿತಿ ಮನವಿ ಮಾಡಿದೆ.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಮಿತಿ ಅಧ್ಯಕ್ಷ ಕೃಷ್ಣದಾಸ್ ,ಯಾವುದೇ ಕಾರಣಕ್ಕೂ ತಮ್ಮ ಉಪ ಜಾತಿಯ ಹೆಸರನ್ನು ಮರೆ ಮಾಚಬಾರದು ಎಂದರು.

ಪರಿಶಿಷ್ಟ ಜಾತಿಗೆ ಸೇರಿದ ಹೊಲೆಯ ಮತ್ತು ಮಾದಿಗ ಉಪಜಾತಿಯ ಕುಟುಂಬಗಳು ಸ್ಪಷ್ಟವಾಗಿ ತಮ್ಮ ಉಪಜಾತಿ ಹೆಸರನ್ನು ನಮೂದಿಸಬೇಕು.




ಏಕೆಂದರೆ ಏಳೆಂಟು ಜಿಲ್ಲೆಗಳಲ್ಲಿ ಹೊಲೆಯ ಮತ್ತು ಮಾದಿಗ ಜಾತಿಗೆ ಸೇರಿದ ಉಪ ಜಾತಿಗಳಲ್ಲಿ ಗೊಂದಲ ಉಂಟಾಗಿದೆ. ಹಾಸನ ಸೇರಿ ಕೆಲ ಜಿಲ್ಲೆಗಳಲ್ಲಿ ಹೊಲೆಯರನ್ನು ಆದಿ ಕರ್ನಾಟಕ(ಎಕೆ) ಎಂದೂ, ತುಮಕೂರು ಹಾಗೂ ವಿವಿಧ ಜಿಲ್ಲೆಗಳಲ್ಲಿ ಮಾದಿಗರನ್ನು ಆದಿ ಕರ್ನಾಟಕ ಎಂದು ಜಾತಿ ಪ್ರಮಾಣ ಪತ್ರ ನೀಡಲಾಗಿದೆ. ಈ ಗೊಂದಲಗಳಿಗೆ ಪರಿಹಾರ ಸಿಗಬೇಕು ಎಂದರೆ ಹೊಲೆಯ ಮತ್ತು ಮಾದಿಗ ಸಮುದಾಯದವರು ಗಣತಿದಾರರಿಗೆ ತಮ್ಮ ಉಪ ಜಾತಿಯ ಹೆಸರನ್ನು ನಿಖರವಾಗಿ ಹೇಳಬೇಕು ಎಂದು ಮನವಿ ಮಾಡಿದರು.

ಆದಿ ಕರ್ನಾಟಕ, ಆದಿ ದ್ರಾವಿಡ, ಆದಿ ಆಂಧ್ರ, ಹೀಗೆ ಬರೆಸಬಾರದು, ನಗರ ಪ್ರದೇಶಗಳಲ್ಲಿ ಮನೆ ಬಾಡಿಗೆ ಪಡೆಯಲು ಹೊಲೆಯರು, ಮಾದಿಗರು ಜಾತಿ ಮುಚ್ಚಿಟ್ಟು, ಬೇರೆ ಜಾತಿ ಹೆಸರು ಹೇಳಿ ವಾಸಿಸುತ್ತಿರುವುದು ಕಂಡು ಬಂದಿದೆ. ಇಂಥವರು ಯಾವುದೇ ಕಾರಣಕ್ಕೂ ಉಪಜಾತಿ ಮರೆ ಮಾಚಬಾರದು. ಸಾಧ್ಯವಾದಷ್ಟು ಮನೆಯಲ್ಲೇ ಇದ್ದು ನಿಖರ ಮಾಹಿತಿ ಕೊಡಿ ಎಂದು ಕೋರಿದರು.

ಸುದ್ದಿಗೋಷ್ಠಿಯಲ್ಲಿ ಸಮಿತಿ ಪ್ರಧಾನ ಕಾರ್ಯದರ್ಶಿ ಶಂಕರ್‌ದಾಸ್, ಕಾರ್ಯದರ್ಶಿ ನಾಗರಾಜ್ ಹೆತ್ತೂರು, ಉಪಾಧ್ಯಕ್ಷರಾದ ಅಂಬುಗ ಮಲ್ಲೇಶ್, ಸತೀಶ್, ಸಹಕಾರ್ಯದರ್ಶಿ ಪ್ರಕಾಶ್ ವಿರೂಪಾಕ್ಷಿಪುರ ಮತ್ತು ಖಜಾಂಚಿ ದಂಡೋರ ಕುಮಾರಸ್ವಾಮಿ ಇದ್ದರು.

# ವಕ್ಫ್ ತಿದ್ದುಪಡಿ ಕಾಯ್ದೆ ವಿರೋಧಿಸಿ ಪ್ರತಿಭಟನೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ನಗರದ ಹೇಮಾವತಿ ಪ್ರತಿಮೆ ಎದುರು ಕೇಂದ್ರ ಸರಕಾರದ ಅಸಂವಿಧಾನಿಕ ಹಾಗೂ ಮುಸ್ಲಿಂ ವಿರೋಧಿ ವಕ್ಫ್ ತಿದ್ದುಪಡಿ ಕಾಯ್ದೆ ವಿರೋಧಿಸಿ ಯುವ ಕಾಂಗ್ರೆಸ್ ಕಾರ್ಯಕರ್ತರು ಕಪ್ಪು ಬಾವುಟ ಪ್ರದರ್ಶಿಸಿ ಹಾಗೂ ಕೈ ತೋಳಿಗೆ ಕಪ್ಪು ಪಟ್ಟಿ ಧರಿಸಿ ಪ್ರತಿಭಟನೆ ನಡೆಸಿ ಆಕ್ರೋಶ ವ್ಯಕ್ತಪಡಿಸಿದರು.

ಹಾಸನ ವಿಧಾನ ಸಭಾ ಕ್ಷೇತ್ರದ ಅಸೆಂಬ್ಲಿ ಅಧ್ಯಕ್ಷ ಇರ್ಫಾನ್ ಮಾತನಾಡಿ, ಕೇಂದ್ರದ ಎನ್‌ಡಿಎ ಸರಕಾರ ವಕ್ಫ್ ಕಾಯಿದೆ ತಿದ್ದುಪಡಿ ಮೂಲಕ ಮುಸ್ಲಿಂರ ಮೇಲೆ ದ್ವೇಷ ಸಾಧಿಸುತ್ತಿದೆ. ವಕ್ಫ್ ಆಸ್ತಿ ಎಂದರೆ




ಮೋದಿ ಮತ್ತು ಅಮಿತ್ ಶಾ ಅವರ ಆಸ್ತಿ ಎಂದುಕೊಂಡಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಇದು ಅಲ್ಲಾನ ಹೆಸರಿನಲ್ಲಿ ಮುಸಲ್ಮಾನರು ದಾನ ಮತ್ತು ದೇಣಿಗೆ ಕೊಟ್ಟಿರುವ ಸಂಪತ್ತಾಗಿದೆ. ಇದನ್ನು ಕೇಂದ್ರ ಸರ್ಕಾರ ಮಾರಾಟ ಮಾಡಲು ಹೊರಟಿದಿದೆ. ನಾವು ಭಾರತೀಯ ಮುಸಲ್ಮಾನರು ಇದಕ್ಕೆಲ್ಲಾ ಜಗ್ಗುವುದಿಲ್ಲ, ಬಗ್ಗುವುದಿಲ್ಲ. ಇದನ್ನು ವಿರೋಧ ಮಾಡುತ್ತೇವೆ. ಮುಂದಿನ ದಿನಗಳಲ್ಲಿ ಇದರ ವಿರುದ್ಧ ಉಗ್ರ ಹೋರಾಟ ಮಾಡುತ್ತೇವೆ ಎಂದರು. ಹಲವಾರು ಮುಸ್ಲಿಂರೂ ಕೂಡ ಈ ದೇಶದ ಸ್ವಾತಂತ್ರ್ಯಕ್ಕಾಗಿ ತಮ್ಮ ಪ್ರಾಣ ತ್ಯಾಗ ಮಾಡಿದ್ದಾರೆ. ಆದರೂ ದೇಶದಲ್ಲಿ ಮುಸ್ಲಿಂ ಭಾವನೆಗೆ ಧಕ್ಕೆ ತರುವ ಕೆಲಸವನ್ನು ಬಿಜೆಪಿಯವರು ಮಾಡುತ್ತಿದ್ದಾರೆ.

ಇವರಿಗೆ ಮುಸ್ಲಿಂರ ಭಾವನೆ ಗೊತ್ತಿಲ್ಲ. ಹೊಸ ಕಾಯ್ದೆ ಅಥವಾ ತಿದ್ದುಪಡಿ ಮಾಡಿ ಮುಸ್ಲಿಂರನ್ನು ಹೆದರಿಸಲು ಹೊರಟರೆ ನಾವು ಹೆದರುವುದಿಲ್ಲ ಎಂದು ಎಚ್ಚರಿಸಿದರು.

ಪ್ರತಿಭಟನೆಯಲ್ಲಿ ಯುವ ಕಾಂಗ್ರೆಸ್ ಜಿಲ್ಲಾಧ್ಯಕ್ಷ ರಂಜಿತ್ ಗೊರೂರು, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಶಾಹಿದ್, ಇಸ್ಮಾಯಿಲ್, ಹರ್ಷದ್, ನಿಹಾಲ್, ಕಿರಣ್ ಮೊದಲಾದವರಿದ್ದರು.

# ಅಪಘಾತ : ಫುಡ್ ಡೆಲಿವರಿ ಬಾಯ್ ಸಾವು

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಎರಡು ಬೈಕ್‌ಗಳ ನಡುವೆ ಮುಖಾಮುಖಿ ಡಿಕ್ಕಿ ಸಂಭವಿಸಿ ಝೊಮ್ಯಾಟೋ ಫುಡ್ ಡೆಲಿವರಿ ಬಾಯ್ ಸ್ಥಳದಲ್ಲೇ ಮೃತಪಟ್ಟಿರುವ ಘಟನೆ ನಗರದ ಹೊರ ವಲಯದ ಹೆದ್ದಾರಿ 75 ರಲ್ಲಿ ಭಾನುವಾರ ರಾತ್ರಿ ನಡೆದಿದೆ.



ಎಸ್.ಬಿ.ಎಂ. ಲೇಔಟ್ ನಿವಾಸಿ ಸತೀಶ್ (45) ಮೃತರು. ಮತ್ತೊಬ್ಬ ಬೈಕ್ ಸವಾರ ಗಂಭೀರ ಗಾಯಗೊಂಡಿದ್ದಾನೆ.

ಘಟನೆ ವಿವರ: ರಾತ್ರಿ 9.30 ಗಂಟೆ ಸಮಯದಲ್ಲಿ ಫುಡ್ ಡೆಲಿವರಿ ಮಾಡಲು ಕೆಎ-13-ಇಯು-8694 ನಂಬರಿನ ಹೊಂಡಾ ಯುನಿಕಾರ್ನ್ ಬೈಕ್‌ನಲ್ಲಿ ನಗರದಿಂದ ಸತೀಶ್ ಗೆಂಡೆಗಟ್ಟೆ ಕಡೆಗೆ ತೆರಳುತ್ತಿದ್ದ.

ಗವೇನಹಳ್ಳಿ ಬಳಿಯ ಶ್ರೀ ಮಂಜುನಾಥ್ ಕಲ್ಯಾಣ ಮಂಟಪದ ಬಳಿ ಹಾದು ಹೋಗಿರುವ ಬಿ.ಎಂ ರಸ್ತೆಯಲ್ಲಿ ಗವೇನಹಳ್ಳಿ ಕ್ರಾಸ್ ಬಳಿ ಸಿಗ್ನಲ್ ಹಾಕಿಕೊಂಡು ಬೈಕನ್ನು ಬಲಭಾಗಕ್ಕೆ ತಿರುಗಿಸುತ್ತಿದ್ದ, ನಗರದ ಬುಸ್ತೇನಹಳ್ಳಿ ಸರ್ಕಲ್ ಕಡೆಯಿಂದ ಡೈರಿ ಸರ್ಕಲ್ ಕಡೆಗೆ ವೇಗವಾಗಿ ಬಂದ ಕೆಎ-13-ಎಪಿ-9752 ಬಜಾಜ್ ಪಲ್ಸರ್ ಬೈಕ್ ಚಾಲಕ ತನ್ನ ಬೈಕನ್ನು ನಿರ್ಲಕ್ಷ್ಯತೆಯಿಂದ ಚಾಲನೆ ಮಾಡಿಕೊಂಡು ಬಂದು ಸತೀಶ್ ಇದ್ದ ಬೈಕಿಗೆ ಗುದ್ದಿದ್ದಾನೆ. ಸತೀಶ್ ಬೈಕ್ ಸಮೇತ ಕೆಳಗೆ ಬಿದ್ದು, ತಲೆ ಮೈಕೈಗೆ ತೀವ್ರ ರಕ್ತಗಾಯಗಳಾಗಿದ್ದು, ಕೂಡಲೇ ಅವರನ್ನು ಆ್ಯಂಬುಲೆನ್ಸ್ ಮೂಲಕ ಹಿಮ್ಸ್ ಆಸ್ಪತ್ರೆಗೆ ದಾಖಲಿಸಲಾಯಿತು. ಆದರೆ ಚಿಕಿತ್ಸೆ ಫಲಕಾರಿಯಾಗದೆ ರಾತ್ರಿ 10.55ರ ಸುಮಾರಿಗೆ ಮೃತಪಟ್ಟಿದ್ದಾನೆ. ಸ್ಥಳಕ್ಕೆ ಸಂಚಾರಿ ಪೊಲೀಸರು ಭೇಟಿ ನೀಡಿ ಪರಿಶೀಲಿಸಿದರು. ಮೃತರ ಪತ್ನಿ ರುಕ್ಮಿಣಿ ಅವರು ನೀಡಿದ ದೂರು ಆಧರಿಸಿ ಪ್ರಕರಣ ದಾಖಲಿಸಿ ತನಿಖೆ ಕೈಗೊಂಡಿದ್ದಾರೆ.

# ಬೆಲೆ ಏರಿಕೆ ವಿರುದ್ಧ ಆಕ್ರೋಶ




ಹಾಸನ : ಕೇಂದ್ರ, ರಾಜ್ಯ ಸರ್ಕಾರಗಳ ಬೆಲೆ ಏರಿಕೆ ವಿರುದ್ಧ ಏ.18 ರಿಂದ 28 ರ ವರೆಗೆ ವಿಮೆನ್ ಇಂಡಿಯಾ ಮೂವ್‌ಮೆಂಟ್ ವತಿಯಿಂದ ಪ್ರತಿಭಟನಾ ಅಭಿಯಾನ ಹಮ್ಮಿಕೊಳ್ಳಲಾಗಿದೆ ಎಂದು ಮೂವ್‌ಮೆಂಟ್ ಜಿಲ್ಲಾಧ್ಯಕ್ಷರಾದ ಅಫ್ರೋಜಾಬೇಗಂ ಹೇಳಿದರು.

ಇಂದು ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಉಭಯ ಸರ್ಕಾರಗಳು ಜನರ ಮೇಲೆ ವಿಪರೀತ ಆರ್ಥಿಕ ಹೊರೆ ಹೇರುತ್ತಿವೆ. ಈಗಾಗಲೇ ಅಗತ್ಯ ವಸ್ತುಗಳ ಬೆಲೆ ಏರಿಕೆಯಾಗಿದೆ. ಇದರಿಂದ ಜನ ತತ್ತರಿಸಿ ಹೋಗಿದ್ದರೂ, ಸರ್ಕಾರಗಳು ಏಕ ಪಕ್ಷೀಯವಾಗಿ ನಡೆದುಕೊಳ್ಳುತ್ತಿವೆ. ಅಬಕಾರಿ ಸುಂಕ ಏರಿಕೆ ಮೂಲಕ ಹಗಲು ದರೋಡೆ ಮಾಡುತ್ತಿದೆ ಎಂದು ದೂರಿದರು. ಸುದ್ದಿಗೋಷ್ಠಿಯಲ್ಲಿ ಪ್ರಧಾನ ಕಾರ್ಯದರ್ಶಿ ಸಹೇರಾ ಬಾನು, ಫಾತಿಮಾ, ಫಿರ್ದೋಸಿ ಇದ್ದರು.

# ನಿಲ್ಲದ ಆನೆ ಕಾಟ-ಓಡಾಟ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಜಿಲ್ಲೆಯ ಮಲೆನಾಡು ಭಾಗದಲ್ಲಿ ಗಜಗಲಾಟೆ ನಿರಂತರವಾಗಿದೆ. ಒಂದೆಡೆ ಬೆಳೆ ಹಾನಿ, ಆಸ್ತಿಪಾಸ್ತಿ ನಷ್ಟವಾಗುತ್ತಿದ್ದರೆ ಮತ್ತೊಂದೆಡೆ ಗಜಪಡೆ ಹಿಂಡು ಹಿಂಡಾಗಿ ಓಡಾಡುವ ದೃಶ್ಯ ಸಾಮಾನ್ಯವಾಗಿದೆ.

ಮರಿಯಾನೆ ಸೇರಿದಂತೆ ಹತ್ತಾರು ಆನೆಗಳ ಹಿಂಡು, ರಸ್ತೆ ದಾಟುವ ವಿಡಿಯೋ ಸ್ಥಳೀಯರ ಮೊಬೈಲ್‌ನಲ್ಲಿ ಸೆರೆಯಾಗಿದೆ. ಬೇಲೂರು ತಾಲೂಕು ಚೀಕನಹಳ್ಳಿಯಲ್ಲಿ ಹಿಂಡು ಹಿಂಡಾಗಿ ಕಾಡಾನೆಗಳು ರಸ್ತೆ ಡಾಟುವ ದೃಶ್ಯ ಸೆರೆಯಾಗಿದೆ.

ಕೃಷ್ಣೇಗೌಡ ಎಂಬುವರ ತೋಟಕ್ಕೆ ಕಾಡಾನೆಗಳ ಗುಂಪು ಲಗ್ಗೆಯಿಟ್ಟಿವೆ.



ಇದು ಸ್ಥಳೀಯರಲ್ಲಿ ಆತಂಕ ಮೂಡಿಸಿದೆ. ಮತ್ತೊಂದೆಡೆ ಒಂಟಿಸಲಗವೊಂದು ಆಹಾರ ಅರಸಿ ಮನೆಯ ಬಳಿ ಬಂದ ಘಟನೆ ಸಕಲೇಶಪುರ ತಾಲುಕು ಯರಗಳ್ಳಿ ಗ್ರಾಮದಲ್ಲಿ ನಡೆದಿದೆ.

ಕಾಡಾನೆ ಕಂಡು ಮನೆಯವರು ಮೈಕ್‌ನಲ್ಲಿ ಶಬ್ದ ಮಾಡುತ್ತಿದ್ದಂತೆ ಗಾಬರಿಯಿಂದ ಕಾಡಾನೆ ಅಲ್ಲಿಂದ ಓಡಿ ಹೋಗಿದೆ.

ಮನಸ್ವಿ ಎಂಬುವವರ ತೋಟದ ಮನೆ ಬಳಿಗೆ ಒಂಟಿ ಸಲಗ ಬಂದಿರುವುದು ಸಿಸಿಟಿವಿಯಲ್ಲಿ ಸೆರೆಯಾಗಿದೆ. ಕಾಡಾನೆ ಕಂಡು ಮೈಕ್‌ನಿಂದ ಶಬ್ದ ಮಾಡಿದ ಕೂಡಲೇ ಕಾಡಾನೆ ಅಲ್ಲಿಂದ ಕಾಲ್ಕಿತ್ತಿದೆ.

# ಅಭಿವೃದ್ಧಿ ಕಾಮಗಾರಿಗೆ ಗುದ್ದಲಿ ಪೂಜೆ

ಹಾಸನ: ನಗರದ ತಣ್ಣೀರು ಹಳ್ಳದಿಂದ ವಿಜಯನಗರ ಬಡಾವಣೆ ವರೆಗೆ ಹೇಮಾವತಿ ನದಿ ಕುಡಿಯುವ ನೀರಿನ ಪೈಪ್ ಲೈನ್ ಕಾಮಗಾರಿಗೆ ಇಂದು ಸ್ಥಳೀಯ ಶಾಸಕ ಹೆಚ್.ಪಿ.ಸ್ವರೂಪ್ ಪ್ರಕಾಶ್ ಗುದ್ದಲಿ ಪೂಜೆ ನೆರವೇರಿಸಿದರು.

ಸುಮಾರು 1.77 ಕಿ.ಮೀ ಉದ್ದದ ಪೈಪ್‌ಲೈನ್ ಕಾಮಗಾರಿ 50 ಲಕ್ಷ ರೂ.ವೆಚ್ಚದಲ್ಲಿ ನಡೆಯುತ್ತಿದೆ. ಕಾಮಗಾರಿಗೆ ಬಡಾವಣೆ ಮುಖಂಡರು ಹಾಗೂ ಅಧಿಕಾರಿಗಳು ಹಾಗೂ ಜೆಡಿಎಸ್ ಕಾರ್ಯಕರ್ತರು ಹಾಜರಿದ್ದರು.



ಈ ವೇಳೆ ಮಾತನಾಡಿದ ಶಾಸಕರು, ಬಡಾವಣೆ ಜನರಿಗೆ ಶುದ್ಧ ಕುಡಿಯುವ ನೀರು ಒದಗಿಸುವ ಸಲುವಾಗಿ ಈ ಕಾಮಗಾರಿ ಕೈಗೊಳ್ಳಲಾಗಿದ್ದು, ಗುಣಮಟ್ಟದ ಕಾಮಗಾರಿಗೆ ಸಂಬಂಧಿಸಿದ ಇಲಾಖೆ ಅಧಿಕಾರಿಗಳು ಹಾಗೂ ಗುತ್ತಿಗೆದಾರರಿಗೆ ಸೂಚನೆ ನೀಡಲಾಗಿದೆ ಎಂದರು.

# ದೈಹಿಕವಾಗಿ ಸದೃಢರಾಗಲು ಕ್ರೀಡೆಗಳು ಸಹಕಾರಿ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹೊಳೆನರಸೀಪುರ : ಕ್ರೀಡಾಪಟುಗಳು ಮಾನಸಿಕವಾಗಿ ಮತ್ತು ದೈಹಿಕವಾಗಿ ಸದೃಢರಾಗಲು ಕ್ರೀಡೆಗಳು ಅತ್ಯಂತ ಸಹಕಾರಿಯಾಗಲಿವೆ ಎಂದು ಲೋಕಸಭಾ ಸದಸ್ಯರಾದ ಶ್ರೇಯಸ್ ಎಂ ಪಟೇಲ್ ತಿಳಿಸಿದರು. ಅವರು ತಾಲೂಕಿನ ಹಳೆಕೋಟೆ ಹೋಬಳಿ ಚಾಕೇನಹಳ್ಳಿ ಗ್ರಾಮದ ಮೈದಾನದಲ್ಲಿ ಮಳಲಿ ಪ್ರೀಮಿಯರ್ ಲೀಗ್ ಕ್ರಿಕೆಟ್ ತಂಡದವರು ಆಯೋಜಿಸಿದ್ದ ಜಿ ಪುಟ್ಟಸ್ವಾಮಿ ಗೌಡ್ರು, ಕಪ್ ಟೆನ್ನಿಸ್ ಬಾಲ್ ಕ್ರಿಕೆಟ್ ಪಂದ್ಯಾವಳಿಯಲ್ಲಿ ವಿಜೇತರಾದ ಕ್ರೀಡಾಪಟುಗಳಿಗೆ ನಗದು ಮತ್ತು ಪಾರಿತೋಷಕ ವಿತರಿಸಿ ಮಾತನಾಡಿದರು. ಕ್ರೀಡೆಯ ಜೊತೆಗೆ ತಮ್ಮ ಭವಿಷ್ಯವನ್ನು ಉತ್ತಮವಾಗಿ ರೂಪಿಸಿಕೊಳ್ಳಲು ಶಿಕ್ಷಣಕ್ಕೆ ಹೆಚ್ಚು ಮಹತ್ವ ನೀಡಬೇಕು. ಓದಿನ ನಂತರ ಬಿಡುವಿನ ವೇಳೆಯಲ್ಲಿ ತಮ್ಮ ಆರೋಗ್ಯವನ್ನು ಸುಧಾರಿಸಿಕೊಳ್ಳುವ ಸಲುವಾಗಿ ಕ್ರೀಡೆಗಳಲ್ಲಿ ಪಾಲ್ಗೊಳ್ಳುವ ಹವ್ಯಾಸವನ್ನು ರೂಡಿಸಿಕೊಳ್ಳಬೇಕು. ಕ್ರೀಡೆಗೋಸ್ಕರ ತಮ್ಮ ಅತ್ಯಮೂಲ್ಯ ಬಹುತೇಕ ಸಮಯವನ್ನು ವ್ಯರ್ಥ ಮಾಡುವುದರಿಂದ ದೂರ ಸರಿಯಬೇಕು ಎಂದು ಸಲಹೆ ನೀಡಿದರು. ಹಂಗರಹಳ್ಳಿ ಗ್ರಾಮದ ಕ್ರೀಡಾಪಟುಗಳು ಪ್ರಥಮ ಸ್ಥಾನವನ್ನು ಗಳಿಸಿ 1 ಲಕ್ಷ ರೂ ನಗದು ಮತ್ತು ಪಾರಿತೋಷಕವನ್ನು ತಮ್ಮದಾಗಿಸಿಕೊಂಡು ಸಂಸದ ರಿಂದ ಬಹುಮಾನ ಸ್ವೀಕರಿಸಿದರು. ಅದೇ ರೀತಿ ಕ್ರಮವಾಗಿ ದ್ವಿತೀಯ, ತೃತೀಯ, ನಾಲ್ಕನೇ ಬಹುಮಾನವನ್ನು ಮ ಳಲಿ, ಹರಿಹರ ಪುರ ಮತ್ತು ಮಳಲಿ 2ನೇ ತಂಡ ತಮ್ಮದಾಗಿಸಿಕೊಂಡು ಶ್ರೇಯಸ್ ಎಂ.ಪಟೇಲ್ ಅವರಿಂದ ನಗದು ಮತ್ತು ಪಾರಿತೋಷಕವನ್ನು ಪಡೆದುಕೊಂಡರು. ಪಂದ್ಯ ಶ್ರೇಷ್ಠ ಕ್ರೀಡಾಪಟು ಮಾವನೂರು ರಾಕೇಶ್ ಸಂಸದ ರಿಂದ ಟಿವಿ ಮತ್ತು ಪಾರಿತೋಷಕವನ್ನು ಸ್ವೀಕರಿಸಿದರು. ಹಾಗೆಯೇ ಚಿಕ್ಕನಹಳ್ಳಿ ಗ್ರಾಮದಲ್ಲಿ ಡಾಕ್ಟರ್ ಬಿಆರ್ ಅಂಬೇಡ್ಕರ್ ಅವರ ಜನ್ಮ ದಿನಾಚರಣೆಯ ಪ್ರಯುಕ್ತ ಜೈ ಭೀಮೋತ್ಸವ ಅಭಿಮಾನಿಗಳು ಆಯೋಜಿಸಿದ್ದ ಜೈ ಭೀಮ್ ವಾಲಿಬಾಲ್ ಪಂದ್ಯಾವಳಿಯಲ್ಲಿ ವಿಜೇತರಾದ ತಂಡಗಳಿಗೆ ನಗದು ಮತ್ತು ಪಾರಿತೋಷಕ ವನ್ನು ಸಂಸದರಾದ ಶ್ರೇಯಸ್ ಎಂ ಪಟೇಲ್ ಅವರು ನೀಡಿ ಎಲ್ಲಾ ಕ್ರೀಡಾಪಟು ಶುಭವಾಗಲೆಂದು ತಿಳಿಸಿದರು. ಈ ಪಂದ್ಯವು ಶನಿವಾರ ಮತ್ತು ಭಾನುವಾರ ನಡೆಯಿತು. ಬಹುಮಾನ ವಿತರಣ ಸಂದರ್ಭದಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಚ್. ಟಿ. ಲಕ್ಷ್ಮಣ, ಕಾಂಗ್ರೆಸ್ ಮುಖಂಡರುಗಳಾದ ಸುರೇಶ್, ಮಹೇಶ್, ಮಂಜು, ರವಿ ಸೇರಿದಂತೆ ನೂರಾರು ಹಿರಿಯ ಮತ್ತು ಯುವ ಕ್ರೀಡಾಪಟುಗಳು ಹಾಜರಿದ್ದರು.

# ಜೆಇಇ ಮೇನ್ಸ್‌ಗೆ ಅರ್ಹತೆ ಸಾಧಿಸಿದ ಎಪಿಜೆ ಕಾಲೇಜಿನ 19 ವಿದ್ಯಾರ್ಥಿಗಳು

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ದೇಶದ ಪ್ರತಿಷ್ಠಿತ ತಾಂತ್ರಿಕ ವಿಶ್ವವಿದ್ಯಾನಿಲಯಗಳಿಗೆ ಪ್ರವೇಶ ಪಡೆಯಲು ನಡೆಸುವ ನ್ಯಾಷನಲ್ ಟೆಸ್ಟಿಂಗ್ ಏಜೆನ್ಸಿ (ಎನ್‌ಟಿಎ) ಜೆ.ಇ.ಇ (ಮೇನ್ಸ್ ) 2025 ಅರ್ಹತಾ ಪರೀಕ್ಷೆ ಫಲಿತಾಂಶ ಪ್ರಕಟವಾಗಿದ್ದು, ಹಾಸನದ ಎ.ಪಿ.ಜೆ ಪದವಿ ಪೂರ್ವ ಕಾಲೇಜು ಅತ್ಯುತ್ತಮ ಸಾಧನೆ ಮಾಡಿದೆ.

ಕಾಲೇಜಿನ 19 ವಿದ್ಯಾರ್ಥಿಗಳು ಜೆ.ಇ.ಇ (ಅಡ್ವಾನ್ಸ್ಡ್)ಪರೀಕ್ಷೆ ಬರೆಯಲು ಅರ್ಹತೆ ಪಡೆದುಕೊಂಡಿರುವುದು ಸಂಸ್ಥೆಯ ಪ್ರತಿಷ್ಠೆ ಹಾಗೂ ಹಿರಿಮೆಯನ್ನು ಹೆಚ್ಚಿಸಿದೆ. ಪರೀಕ್ಷೆಯಲ್ಲಿ ವಿದ್ಯಾರ್ಥಿಗಳು ಗಮನಾರ್ಹ ಪರ್ಸೆಂಟೈಲ್ ಅಂಕ ಗಳಿಸಿದ್ದಾರೆ. ಮೊಹಮ್ಮದ್ ಯೂಸುಫ್ 99.3087 ಪರ್ಸೆಂಟೈಲ್ ಗಳಿಸುವ



ಮೂಲಕ ಅಖಿಲ ಭಾರತ 2434 ಕೆಟಗರಿ ರ್‍ಯಾಂಕ್ ಪಡೆದರೆ, ಪ್ರಜ್ವಲ್ ವಿ.ಜೋಯಿಸ್ 99.2750 ಪರ್ಸೆಂಟೈಲ್ ,ಪವನ್ ಕೆ.ಆರ್ 98.6378 ಪರ್ಸೆಂಟೈಲ್ ಮೋಹಿತ್ ಎಂ ನಾಯಕ್ 98.4921 ಪರ್ಸೆಂಟೈಲ್ ಗಳಿಸುವ ಮೂಲಕ ಅಖಿಲ ಭಾರತ 584 ಕೆಟಗರಿ ರ್‍ಯಾಂಕ್, ಎಂ.ಎನ್.ಪ್ರಶಾಂತ್ ಕುಮಾರ್ 98.2413 ಪರ್ಸೆಂಟೈಲ್, ತನ್ಮಯಿ ಎಚ್. ಎಸ್.97.9436 ಪರ್ಸೆಂಟೈಲ್ ಗಳಿಸುವ ಮೂಲಕ ಅಖಿಲ ಭಾರತ 185 ಕೆಟಗರಿ ರ್‍ಯಾಂಕ್ ಗಳಿಸಿದ್ದಾರೆ. ವಿದ್ಯಾರ್ಥಿಗಳ ಈ ಸಾಧನೆಗೆ ಸಂಸ್ಥೆಯ ಆಡಳಿತ ಮಂಡಳಿ, ಪ್ರಾಂಶುಪಾಲರು, ಭೋದಕ ಮತ್ತು ಭೋದಕೇತರ ಸಿಬ್ಬಂದಿ ಅಭಿನಂದಿಸಿದ್ದಾರೆ.

# ಮತ್ಸ್ಯ ಹೆಜ್ಜೆ ಚಿತ್ರಕಲಾ ಪ್ರದರ್ಶನ: ಕಲಾ ಸ್ವಾತಂತ್ರ್ಯದ ವೈಭವ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್



ಹಾಸನ, ಏಪ್ರಿಲ್ 21, 2025: ಚಿತ್ರಕಲಾವಿದೆ ಜಿ.ಶೋಭಾರಾಣಿ ಅವರ ಕಲಾಕೃತಿಗಳಲ್ಲಿನ ರೂಪಗಳ ಬಳಕೆ ಅದ್ಭುತವಾಗಿದ್ದು, ಅವು ಕಲಾಕೃತಿಯ ಮೌಲ್ಯವನ್ನು ಉನ್ನತೀಕರಿಸಿವೆ ಎಂದು ಕಲಾ ಚಿಂತಕ ಗಣಪತಿ ಅಗ್ನಿಹೋತ್ರಿ ಹೇಳಿದರು.

ಚಿತ್ಕಲಾ ಫೌಂಡೇಶನ್‌ನ ಆಶ್ರಯದಲ್ಲಿ ನಗರದವಿದ್ಯಾನಗರದ ಕಲಾಶ್ರೀ ಗ್ಯಾಲರಿಯಲ್ಲಿ ಆಯೋಜಿಸಿರುವ ಮೈಸೂರಿನ ಕಲಾವಿದೆ ಜಿ. ಶೋಭಾರಾಣಿ ಜಿ. ಅವರ ಶಿಶಿಮತ್ಸ್ಯ ಹೆಜ್ಜೆ ಚಿತ್ರಕಲಾ ಪ್ರದರ್ಶನದ ಉದ್ಘಾಟನಾ ಸಮಾರಂಭದಲ್ಲಿ ಅವರು ಮಾತನಾಡಿದರು.

ಶೋಭಾರಾಣಿಯವರ ಕಲಾಕೃತಿಗಳಲ್ಲಿ ರೂಪಕಗಳ ಬಳಕೆ ಅದ್ಭುತವಾಗಿದೆ. ಒಂದರ ಮೇಲೊಂದು ಮೀನುಗಳಿದ್ದರೂ, ಹಿಂದಿರುವ ಮೀನಿನ ಭಾವಗಳು ಸ್ಪಷ್ಟವಾಗಿ ಗೋಚರಿಸುತ್ತವೆ. ಇಂತಹ ರೂಪಕಗಳು ಕಲಾಕೃತಿಯ ಮೌಲ್ಯವನ್ನು ಉನ್ನತೀಕರಿಸುತ್ತವೆ, ಎಂದು ಅವರು ವಿಶ್ಲೇಷಿಸಿದರು. ಅವರ ಚಿತ್ರಗಳಲ್ಲಿರುವ ರೇಖೆಗಳು, ಬಣ್ಣಗಳು, ಮತ್ತು ತಂತ್ರಗಾರಿಕೆ ಶ್ರೇಷ್ಠ ಮಟ್ಟಕ್ಕೆ ತಲುಪುವ ಸಾಮರ್ಥ್ಯವನ್ನು ಸೂಚಿಸುತ್ತವೆ ಎಂದು ಶ್ಲಾಘಿಸಿದರು.

ಪ್ರದರ್ಶನ ಉದ್ಘಾಟಿಸಿದ ಲೇಖಕಿ ರೂಪ ಹಾಸನ್ ಮಾತನಾಡಿ, ದೇಸಾಯಿ ಕುಟುಂಬದ ಕಲಾಸೇವೆಯನ್ನು ಸ್ಮರಣಾರ್ಹವಾಗಿದೆ. ಶೋಭಾರಾಣಿಯವರ ಕಲಾಕೃತಿಗಳನ್ನು ವೀಕ್ಷಿಸಿದಾಗ ರೋಮಾಂಚನವಾಯಿತು. ಮತ್ಸ್ಯ ಹೆಜ್ಜೆ ಶೀರ್ಷಿಕೆ ಜೀವನದ ಚಲನೆಯನ್ನು ರೂಪಕಾತ್ಮಕವಾಗಿ ವೈಭವೀಕರಿಸುತ್ತದೆ. ಈ ಚಿತ್ರಗಳು ಆಕ್ವೇರಿಯಂನ ಮೀನುಗಳಿಂದ ಪ್ರೇರಿತವಾದರೂ, ಆಕ್ವೇರಿಯಂನ ಸೀಮಿತತೆಯನ್ನು ಮೀರಿ ಸ್ವತಂತ್ರವಾಗಿ ವಿಹರಿಸುವ ಮೀನುಗಳನ್ನು ಚಿತ್ರಿಸಿವೆ.

ಇದು ಮಹಿಳೆಯ ಸ್ವಾತಂತ್ರ್ಯದ ಹೋರಾಟಕ್ಕೆ ಸಾಂಕೇತಿಕವಾಗಿ ಹೋಲುತ್ತದೆ,ಟಿಟಿ ಎಂದು ಅವರು ಅಭಿಪ್ರಾಯಪಟ್ಟರು. ಕವಿತೆ ಮತ್ತು ಚಿತ್ರಕಲೆಯ ಸಾಮ್ಯತೆಯಿಂದ ಈ ಕೃತಿಗಳು ಸಾಮರಸ್ಯ, ಸೌಮ್ಯತೆ, ಮತ್ತು ಸಮಾನತೆಯನ್ನು ಸಾರುತ್ತವೆ,ಟಿಟಿ ಎಂದು ಅವರು ಹೇಳಿದರು.

ಈ ಕಲಾಕೃತಿಗಳು ವೀಕ್ಷಕರನ್ನು ಆಳವಾದ ಚಿಂತನೆಗೆ ಕೊಂಡೊಯ್ಯುವಂತಿವೆ. ಈ ಪ್ರದರ್ಶನವು ಕಲೆಯ ಸ್ವಾತಂತ್ರ್ಯವನ್ನು ಆಚರಿಸುವ ಒಂದು ವೇದಿಕೆಯಾಗಿದೆ ಎಂದರು.

ಪ್ರಾಸ್ತಾವಿಕವಾಗಿ ಮಾತನಾಡಿದ, ಬಿ.ಎಸ್. ದೇಸಾಯಿ ಅವರು, ಚಿತ್ಕಲಾ ಫೌಂಡೇಶನ್‌ನ ಉದ್ದೇಶವು ಹಾಸನದ ಜನತೆಗೆ ಶೋಭಾರಾಣಿಯವರ ಕಲಾಕೃತಿಗಳನ್ನು ಪರಿಚಯಿಸುವುದಾಗಿದೆ. ಶಿಶಿಕಲೆಯ ಮೂಲಕ ಸಮಾಜದೊಂದಿಗೆ ಸಂವಾದವನ್ನು ಸೃಷ್ಟಿಸುವ ಗುರಿಯೊಂದಿಗೆ ಈ ಪ್ರದರ್ಶನವನ್ನು ಆಯೋಜಿಸಲಾಗಿದೆ, ಎಂದರು. ಕಲಾವಿದ ಜಯದೇವಣ್ಣಸೇರಿದಂತೆ ಇತರ ಗಣ್ಯರು ಉಪಸ್ಥಿತರಿದ್ದರು.

# ಏ.23 ರಿಂದ ವಕ್ಫ್ ಜಾಗೃತಿ ಜಾಥಾ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್




ಹಾಸನ: ತೀವ್ರ ವಿರೋಧದ ನಡುವೆಯೂ ವಕ್ಫ್ ಕಾಯ್ದೆಗೆ ತಿದ್ದುಪಡಿ ತಂದಿರುವ ಕೇಂದ್ರ ಸರ್ಕಾರದ ನಡೆ ಖಂಡಿಸಿ,

ಜನರಿಗೆ ಜಾಗೃತಿ ಮೂಡಿಸಲು ಏ.23 ರಂದು ಹಾಸನದಿಂದ ಬೆಂಗಳೂರಿನ ಫ್ರೀಡಂ ಪಾರ್ಕ್‌ವರೆಗೆ ಜಾಥಾ ಹಮ್ಮಿಕೊಳ್ಳಲಾಗಿದೆ ಎಂದು ವೀರ ಕನ್ನಡಿಗ ಟಿಪ್ಪು ಸೇನೆ ಸಂಸ್ಥಾಪಕ ಅಧ್ಯಕ್ಷ ಅಕ್ಮಲ್ ಜಾವೀದ್ ತಿಳಿಸಿದರು. ಇಂದು ಸುದ್ದಿಗೋಷ್ಠಿಯಲ್ಲಿ ಮಾತನಾಡಿದ, ವಕ್ಫ್ ಕಾಯ್ದೆ ತಿದ್ದುಪಡಿಯನ್ನು ಒಪ್ಪಲು ಸಾಧ್ಯವಿಲ್ಲ.

ಇದರಲ್ಲಿ ಸಾಕಷ್ಟು ಲೋಪದೋಷಗಳಿವೆ. ವಕ್ಫ್ ಆಸ್ತಿ ಲೂಟಿ ಮಾಡಿರುವವರ ಮೇಲೆ ಯಾವುದೇ ಕ್ರಮ ಆಗಿಲ್ಲ. ಈ ಪ್ರಶ್ನೆಗೆ ಪ್ರಧಾನಿ ಅವರು ಉತ್ತರಿಸಬೇಕು. ವಕ್ಫ್ ಆಸ್ತಿ ದಾನದ ರೂಪದಲ್ಲಿ ಬಂದಿದ್ದು, ಇದರ ಸಂರಕ್ಷಣೆಗಾಗಿ ವಕ್ಫ್ ಬೋರ್ಡ್ ಇದೆ ಎಂದರು.

ಈ ಸಂಬಂಧ ವಿಧಾನಸೌಧ ಚಲೋ ಮೂಲಕ ರಾಜ್ಯಪಾಲರು, ಮುಖ್ಯಮಂತ್ರಿಗಳು, ವಕ್ಫ್ ಸಚಿವರನ್ನು ಭೇಟಿ ಮಾಡಿ ಮನವಿ ಸಲ್ಲಿಸಲು ಕೈಗೊಂಡಿರುವ ಯಾತ್ರೆಗೆ ಎಲ್ಲರೂ ಕೈಜೋಡಿಸುವಂತೆ ಮನವಿ ಮಾಡಿದರು.

# ಕರ್ನಾಟಕ ಪ್ರಾದೇಶಿಕ ಅಸಮತೋಲನ : ಮರು ಪರಿಶೀಲನೆ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್



ಹಾಸನ : ನಂಜುಂಡಪ್ಪ ಸಮಿತಿಯು ನೀಡಿರುವ ಶಿಫಾರಸ್ಸುಗಳು ಹಾಗೂ ಆ ವರದಿಯಲ್ಲೇನಿದೆ ಜೊತೆಗೆ ಮುಂದೆ ಯಾವ ಅಂಶಗಳನ್ನು ಅಳವಡಿಸಿಕೊಳ್ಳಬೇಕು ಹಾಗೂ ಪ್ರಸ್ತುತದ ಗೋವಿಂದ ರಾವ್ ಸಮಿತಿಯ ವರದಿಗಳು, ಪರಿಕಲ್ಪನೆ, ಒಳನೋಟಗಳು ಮತ್ತು ಹಾಸನ ಜಿಲ್ಲೆಯಲ್ಲಿ ಅಭಿವೃದ್ಧಿಗೆ ಇರುವ ಸವಾಲುಗಳ ಕುರಿತಾಗಿ ಕರ್ನಾಟಕ ಪ್ರಾದೇಶಿಕ ಅಸಮತೋಲನ ನಿವಾರಣಾ ಸಮಿತಿಯ ಸದಸ್ಯರಾದ ಸೂರ್ಯನಾಯಣ ಎಂ.ಹೆಚ್ ಅವರು ಸವಿವರವಾಗಿ ವಿವರಿಸಿದರು.

ಹಾಸನ ಜಿಲ್ಲಾ ಪಂಚಾಯಿತಿಯ ಸಭಾಂಗಣದಲ್ಲಿಂದು ಕರ್ನಾಟಕ ಪ್ರಾದೇಶಿಕ ಅಸಮತೋಲನ ನಿವಾರಣಾ ಸಮಿತಿಯ ಸಂವಾದ ಸಭೆಯಲ್ಲಿ ಮಾತನಾಡಿದ ಅವರು ನಂಜುಂಡಪ್ಪ ಸಮಿತಿಯರವರು ಎರಡು ತಪ್ಪುಗಳನ್ನು ಮಾಡಿದ್ದಾರೆ, ಅಭಿವೃದ್ಧಿ ಅಂದರೆ ಏನು ಎಂಬ ವ್ಯಾಖ್ಯಾನವನ್ನೆ ನೀಡಿಲ್ಲ, ಅಭಿವೃದ್ಧಿಯ ಮಾಪನವಾಗಿ ಕೇವಲ ಸಾಕ್ಷರತಾ ಪ್ರಮಾಣವನ್ನಷ್ಟೆ ತೆಗೆದುಕೊಂಡಿದ್ದಾರೆ ಎಂದು ಹೇಳಿದರು.

ನಂಜುಂಡಪ್ಪ ಸಮಿತಿ ವರದಿಯು ಅತ್ಯಂತ ಹಿಂದುಳಿದವರು 39, ಹೆಚ್ಚು ಹಿಂದುಳಿದವರು 40, ಹಿಂದುಳಿದವರು 35 ಎಂದು ಸಮಗ್ರ ಅಭಿವೃದ್ಧಿ ಸೂಚ್ಯಂಕದ ಆಧಾರದ ಮೇಲೆ ತಾಲ್ಲೂಕುಗಳು ಅಥವಾ ಜಿಲ್ಲೆಗಳ ವರ್ಗೀಕರಣ ಮಾಡಿದೆ ಎಂದರು.

ಗೋವಿಂದ ರಾವ್ ಸಮಿತಿಯು ಡಾ.ಡಿ.ಎಮ್ ನಂಜುಂಡಪ್ಪ ಸಮಿತಿಯು ವರದಿ ಸಲ್ಲಿಸಿದ ನಂತರದಲ್ಲಿ ಅಂತರಜಿಲ್ಲಾ ಮಾನವ ಪ್ರವೃತ್ತಿಗಳು ಹಾಗೂ ಜಿಲ್ಲೆಯ ಜೀವನ ಮಟ್ಟಗಳ ಸುಧಾರಣೆ ಹಾಗೂ ಮಾನವ ಅಭಿವೃದ್ಧಿಯ ವ್ಯತ್ಯಾಸಗಳ ಕುರಿತು ವಿಶ್ಲೇಷಣೆ ನಡೆಸಿ ವರದಿಯಲ್ಲಿ ಚರ್ಚಿಸಲಾಗುವುದು ಎಂದು ತಿಳಿಸಿದರು.

ಗೋವಿಂದ ರಾವ್ ಸಮಿತಿಯಲ್ಲಿ ಅಭಿವೃದ್ಧಿ ಸೂಚಕಗಳಾಗಿ ಆರ್ಥಿಕವಾಗಿ ಒಟ್ಟು ದೇಶೀಯ ಉತ್ಪನ್ನ, ತಲಾ ಆದಾಯ, ಆರ್ಥಿಕ ರಚನೆ, ಸಾಮಾಜಿಕವಾಗಿ ಜೀವಿತಾವಧಿ, ಶಿಶು ಮರಣ ಪ್ರಮಾಣ ಮತ್ತು ಸಾಕ್ಷರತಾ ಪ್ರಮಾಣ, ಪರಿಸರ ಸಂಬಂಧಿತವಾದ ನೈಸರ್ಗಿಕ ಸಂಪನ್ಮೂಲ, ಸವಕಳಿ ಸೂಚಕಗಳನ್ನು ಪರಿಗಣಿಸಲಾಗಿದೆ ಎಂದು ಹೇಳಿದರು.

2011-12 ಹಾಗೂ 2019-20 ರಲ್ಲಿ ರಾಜ್ಯದಲ್ಲಿ ಏನೆಲ್ಲಾ ಅಭಿವೃದ್ಧಿಯಾಗಿದೆ ಎಂಬುದನ್ನು ತಿಳಿಸಿದ ಅವರು, ಹಾಸನ ಅಭಿವೃದ್ಧಿಗೆ ನೀರು ಮತ್ತು ರಾಸಯನಿಕ ಒಳಹರಿವಿನ ಅತಿಯಾದ ಬಳಕೆಯಿಂದ ಮಣ್ಣಿನ ಅವನತಿಯಾಗಿ ಇಳುವರಿ ನಿಂತಿದೆ, ರಾಸಯನಿಕ ಮತ್ತು ಸಾವಯವ ಒಳಹರಿವಿನ ಸಮತೋಲಿತ ಬಳಕೆಯ ಬಗ್ಗೆ ಜಾಗೃತಿ ಮೂಡಿಸುವ ಅಗತ್ಯವಿದೆ, ಕೃಷಿ ಮೂಲಸೌಕರ್ಯಗಳಾದ ಶೇಖರಣಾ ಸೌಲಭ್ಯಗಳು, ಭೂ ಅಭಿವೃದ್ಧಿ, ಮಣ್ಣಿನ ಸಂರಕ್ಷಣೆ ಮತ್ತು ನೀರಿನ ಅಭಿವೃದ್ಧಿ, ಸಾಮಾಜಿಕ ಮೂಲಸೌಕರ್ಯಗಳಾದ ಆರೋಗ್ಯ ಮತ್ತು ಶಿಕ್ಷಣ ಹಾಸನ ಅಭಿವೃದ್ಧಿಗೆ ಸವಾಲಾಗಿವೆ ಎಂದರು.

# ಪ್ರಸ್ತುತ ಜಗತ್ತಿನಲ್ಲಿ ಸಂವಹನ ಮಾಧ್ಯಮದ ಪಾತ್ರ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್



ಹಾಸನ : ಸಂವಹನ ಮಾಧ್ಯಮ ಮೂಲ ಜನಪದ ಸಾಹಿತ್ಯವಾಗಿತ್ತು, ಸಾಮಾಜಿಕ, ರಾಜಕೀಯ ಮತ್ತು ಆರ್ಥಿಕ ಪ್ರಭಾವದಿಂದ ಇಂದು ಜನಪದ ಸಾಹಿತ್ಯ ಸಂವಹನ ಮಾಧ್ಯಮವಾಗಿ ಬೆಳೆದುಬಂದಿದೆ ಎಂದು ವಕೀಲರಾದ ಭರತ್ ಟಿ.ಸಿ ಹೇಳಿದರು.

ನಗರದ ಸರ್ಕಾರಿ ಕಾನೂನು ಕಾಲೇಜಿನ ವತಿಯಿಂದ ದುದ್ದ ಗ್ರಾಮದಲ್ಲಿ ಏರ್ಪಡಿಸಲಾಗಿದ್ದ ಪ್ರಸ್ತುತ ಜಗತ್ತಿನಲ್ಲಿ ಸಂವಹನದ ಮಾಧ್ಯಮದ ಪಾತ್ರ ಎಂಬ ಕಾರ್ಯಕ್ರಮದಲ್ಲಿ ಮುಖ್ಯ ಅಥಿತಿಯಾಗಿ ಭಾಗವಹಿಸಿ ಮಾತನಾಡಿದ ಅವರು, ರೇಡಿಯೋ, ದೂರದರ್ಶನ, ಪತ್ರಿಕೆಗಳು ಮತ್ತು ಚಲನಚಿತ್ರಗಳು ಸಮೂಹ ಸಂವಹನದ ಉತ್ತಮ ಮಾಧ್ಯಮಗಳಿವೆ. ಹಿಂದೆ, ವಿವರಣಾತ್ಮಕ ರೂಪದಲ್ಲಿ ಸಮೂಹ ಮಾಧ್ಯಮವನ್ನು ವೈಯಕ್ತಿಕ ಬಳಕೆಗೆ ಮಾತ್ರ ಬಳಸಲಾಗುತ್ತಿತ್ತು. ಶೈಕ್ಷಣಿಕ ಪ್ರಕ್ರಿಯೆಯಲ್ಲಿ ಈ ಮಾಧ್ಯಮಗಳ ಯಾವುದೇ ಸುಸಂಬದ್ಧ ಚಿಂತನೆ ಇರಲಿಲ್ಲ. ಪ್ರಸ್ತುತ ಸಮಾಜದಲ್ಲಿ ಯುವ ಜನತೆಯನ್ನು ಆಕರ್ಷಿಸಲು ಸಮೂಹ ಮಾಧ್ಯಮಗಳು ಮುಗಿಬಿದ್ದಿವೆ ಇಂತಹ ಸಂದರ್ಭದಲ್ಲಿ ವಸ್ತುನಿಷ್ಠ ವಿಷಯಗಳತ್ತ ಮಾತ್ರ ಗಮನಹರಿಸಬೇಕು ಎಂದು ಹೇಳಿದರು

ಮತ್ತೋರ್ವ ಅಥಿತಿಯಾಗಿ ಆಗಮಿಸಿದ್ದ ಉಪನ್ಯಾಸಕರಾದ ಮೋಹನ್ ಕುಮಾರ್ ಮಾತನಾಡಿ, ಆಧುನಿಕ ಜಗತ್ತಿನಲ್ಲಿ ಯುವ ಜನರು ಪುಸ್ತಕ ಬಿಟ್ಟು ಮೊಬೈಲ್‌ನತ್ತ ಹೆಚ್ಚು ಒಲವು ತೋರುತ್ತಿದ್ದಾರೆ ಇದು ಭವಿಷ್ಯದ ಧೃಷ್ಟಿಯಿಂದ ಒಳ್ಳೆ ಹವ್ಯಾಸವಲ್ಲ. ವಿದ್ಯಾರ್ಥಿಗಳು ಪ್ರತಿದಿನ ಕನಿಷ್ಟ 2 ದಿನಪತ್ರಿಕೆಗಳನ್ನಾದರೂ ಓದುವ ಹವ್ಯಾಸ ರೂಢಿಸಿಕೊಳ್ಳಬೇಕು. ಶೈಕ್ಷಣಿಕ ಸಾಧನೆಯತ್ತ ಗಮನ ಹರಿಸಬೇಕು ಎಂದು ಹೇಳಿದರು.

ನಂತರ ಉಪನ್ಯಾಸಕರಾದ ತೇಜಸ್ ಕುಮಾರ್ ಹೆಚ್.ಆರ್ ಮಾತನಾಡಿ, ಪ್ರಸ್ತುತ ದಿನಗಳಲ್ಲಿ ಸಂವಹನ ಮಾಧ್ಯಮವು ಅತ್ಯುತ್ತಮ ತಂತ್ರಜ್ಞಾನದಿಂದ ಕೂಡಿದೆ, ಈ ಹಿಂದೆ ಇದ್ದ ಗ್ರಾಮೀಣ ಸೊಗಡಿನ ಸಂಹನ ಸುಂದರವಾಗಿತ್ತು ಮತ್ತು ಅಂದಿನ ಸಮಾಜವನ್ನು ವಸ್ತುನಿಷ್ಠವಾಗಿ ಅರ್ಥೈಸುವಲ್ಲಿ ಮುಂಚೂಣಿಯಲ್ಲಿತ್ತು. ಆದರೆ ಇಂದು ಮೊಬೈಲ್‌ನಿಂದಲೇ ಇಡೀ ಪ್ರಪಂಚದ ವಿಚಾರಗಳನ್ನು ತಿಳಿದುಕೊಳ್ಳುವ ಹಂತಕ್ಕೆ ನಾವು ತಲುಪಿದ್ದೇವೆ. ಇದನ್ನು ವಿದ್ಯಾರ್ಥಿಗಳು ಒಳ್ಳೆಯ ರೀತಿ ಬಳಸಿಕೊಳ್ಳಬೇಕು ಎಂದು ತಿಳಿ ಹೇಳಿದರು.

ಕಾರ್ಯಕ್ರಮದಲ್ಲಿ ಎನ್.ಎಸ್.ಎಸ್ ಕಾರ್ಯಕ್ರಮಾಧಿಕಾರಿ ಲೇಪಾಕ್ಷಯ್ಯ ಎಸ್.ವಿ, ಕೃಷ್ಣಾಚಾರಿ ಹೆಚ್.ಕೆ ಹಾಗೂ ಎನ್.ಎಸ್.ಎಸ್ ವಿದ್ಯಾರ್ಥಿಗಳು ಹಾಜರಿದ್ದರು.

# 6ನೇ ತರಗತಿ ಪ್ರವೇಶಕ್ಕೆ ಪ್ರತಿಭಾವಂತ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನ

ಹಾಸನ : ಸಮಾಜಕಲ್ಯಾಣ ಇಲಾಖೆ ವತಿಯಿಂದ 2025-26ನೇ ಶೈಕ್ಷಣಿಕ ವರ್ಷದಲ್ಲಿ ಪ್ರತಿಷ್ಠಿತ ಶಾಲೆಗೆ 6ನೇ ತರಗತಿ ಪ್ರವೇಶ ಬಯಸುವ ಅರ್ಹ ಪ್ರತಿಭಾವಂತ ಪ.ಜಾತಿ/ಪ.ವರ್ಗದ ವಿದ್ಯಾರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿರುತ್ತದೆ.

5ನೇ ತರಗತಿಯಲ್ಲಿ ಶೇಕಡ 60 ಕ್ಕಿಂತ ಹೆಚ್ಚು ಅಂಕಗಳನ್ನು ಪಡೆದು ಉತ್ತೀರ್ಣರಾಗಿರುವ ಹಾಗೂ ವಾರ್ಷಿಕ 2.50 ಲಕ್ಷ ಆದಾಯದ ಮಿತಿಯೊಳಗಿರುವ ಅರ್ಹ ವಿದ್ಯಾರ್ಥಿಗಳು ಸಮಾಜ ಕಲ್ಯಾಣ ಇಲಾಖೆಯ ವೆಬ್‌ಸೈಟ್ www.sw.kar.nic.in ನಲ್ಲಿ ಏ.15 ರಿಂದ ಮೇ.3 ರೊಳಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದಾಗಿದೆ. ಸೂಚನೆಗಳು: ಪ.ಜಾತಿ/ವರ್ಗದ ಹೆಣ್ಣು/ಗಂಡು ಮಕ್ಕಳು ಅರ್ಜಿ ಸಲ್ಲಿಸಬಹುದು. ಅರ್ಜಿ ಸಲ್ಲಿಸುವ ವಿದ್ಯಾರ್ಥಿಗಳನ್ನು ಅರ್ಹತಾ ಪರೀಕ್ಷೆಯ ಮೂಲಕ ಆಯ್ಕೆ ಮಾಡಲಾಗುವುದು. ಸರ್ಕಾರದಿಂದ ಹಾಗೂ ಇಲಾಖೆಯಿಂದ ಅನುಮೋದಿಸಿದ ಶಾಲಾ ಶುಲ್ಕ ನಿರ್ವಹಣಾ ವೆಚ್ಚ ಪಾವತಿಸಲಾಗುವುದು. ಪ್ರತಿಭಾವಂತ ವಿದ್ಯಾರ್ಥಿಯಾಗಿದ್ದು, 5ನೇ ತರಗತಿಯಲ್ಲಿ ಶೇ.60 ಕ್ಕಿಂತ ಹೆಚ್ಚು ಅಂಕ ಪಡೆದಿರಬೇಕು. ಜಾತಿ ಪತ್ರ, ಆದಾಯ ಪತ್ರ, ಬಿ.ಪಿ.ಎಲ್ ರೇಷನ್‌ಕಾರ್ಡ್, 5ನೇ ತರಗತಿ ದೃಡೀಕೃತ ಅಂಕಪಟ್ಟಿ, ವಿದ್ಯಾರ್ಥಿ ವ್ಯಾಸಂಗ ಮಾಡುತ್ತಿರುವ ಮಾಧ್ಯಮದ ಬಗ್ಗೆ ಕಡ್ಡಾಯವಾಗಿ ವಿವರ ಸಲ್ಲಿಸುವುದು, ಪೋಷಕರು ವಾರ್ಷಿಕ ವರಮಾನ 2.50 ಲಕ್ಷ ಮಿತಿಯೊಳಗಿರಬೇಕು ಹಾಗೂ ಸರ್ಕಾರಿ ನೌಕರಿಯಲ್ಲಿರಬಾರದು. ಹೊಸದಾಗಿ ಆಯ್ಕೆ ಬಯಸುವ ವಿದ್ಯಾರ್ಥಿಗಳು ಈಗಾಗಲೇ ಸರ್ಕಾರವು ಗುರುತಿಸಿರುವ ಪ್ರತಿಷ್ಠಿತ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರಬಾರದು. ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ ಮೇ.3 ಆಗಿರುತ್ತದೆ. ಆನ್‌ಲೈನ್‌ನಲ್ಲಿ ಸಲ್ಲಸಿದ ಅರ್ಜಿಯನ್ನು ಸೂಕ್ತ ದಾಖಲಾತಿಗಳೊಂದಿಗೆ ಮೇ.3 ರೊಳಗೆ ಸಹಾಯಕ ನಿರ್ದೇಶಕರು(ಗ್ರೇಡ್-2) ಸಮಾಜ ಕಲ್ಯಾಣ ಇಲಾಖೆ, ಸಕಲೇಶಪುರ ರವರ ಕಚೇರಿಗೆ ತಲುಪಿಸುವುದು.

# ವಿಪಕ್ಷಗಳ ಟೀಕೆಗಳಿಗೆ ಸಾಧನೆ ಮೂಲಕ ಉತ್ತರ ನೀಡುವೆ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್



ಬೇಲೂರು: ವಿಪಕ್ಷಗಳ ಮುಖಂಡರು ಬೇಲೂರು ಶಾಸಕರು ಯಾವುದೇ ಅನುದಾನ ತಂದಿಲ್ಲ, ಸಣ್ಣ-ಪುಟ್ಟ ಕಾಮಗಾರಿಗಳಿಗೆ ಗುದ್ದಲಿಪೂಜೆ ನಡೆಸುತ್ತಿದ್ದಾರೆ ಎಂದು ಟೀಕೆ ಮಾಡುತ್ತಿದ್ದಾರೆ. ಬೇಲೂರಿಗೆ ಅಭಿವೃದ್ಧಿಗೆ ಸೂಕ್ತ ಅನುದಾನ ತರುವ ಮೂಲಕ ಆ ಟೀಕೆಗಳಿಗೆ ಉತ್ತರ ನೀಡುವೆ ಎಂದು ಶಾಸಕ ಹೆಚ್.ಕೆ.ಸುರೇಶ್ ಹೇಳಿದರು.

ತಾಲ್ಲೂಕಿನ ಹೆಬ್ಬಾಳು ಗ್ರಾಮದಿಂದ ಮಲ್ಲನಹಳ್ಳಿ ಗ್ರಾಮದವರೆಗಿನ 3 ಕಿಮೀ. ಉದ್ದದ 1.95 ಕೋಟಿ ರೂ. ವೆಚ್ಚದ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಶಂಕುಸ್ಥಾಪನೆ ನೆರವೇರಿಸಿ ಮಾತನಾಡಿದರು.

ರಾಜ್ಯದಲ್ಲಿ ಸದ್ಯ ಕಾಂಗ್ರೆಸ್ ಸರ್ಕಾರ ಗ್ಯಾರೆಂಟಿ ಯೋಜನೆಗಳಿಗೆ ಎಲ್ಲ ಅನುದಾನ ಬಳಕೆ ಮಾಡುತ್ತಿದೆ. ಹೀಗಾಗಿ ಕ್ಷೇತ್ರದ ಅಭಿವೃದ್ಧಿಗೆ ಯಾವುದೇ ಶಾಸಕರಿಗೆ ಅನುದಾನ ನೀಡುತ್ತಿಲ್ಲ. ಈ ವಿಷಯ ಕಾಂಗ್ರೆಸ್ ನಾಯಕರಿಗೆ ತಿಳಿದಿಲ್ಲವೇ? ಎಂದು ವ್ಯಂಗ್ಯವಾಡಿದರು.

ಬಹು ದಿನಗಳ ಬೇಡಿಕೆಯಾಗಿದ್ದ ಹೆಬ್ಬಾಳು-ಮಲ್ಲನಹಳ್ಳಿ ರಸ್ತೆಗೆ 1.95 ಕೋಟಿ ರೂ., ಮಲ್ಲನಹಳ್ಳಿ ಗಡಿಯಿಂದ ಮುತ್ತುಗನ್ನೆ ಗ್ರಾಮದ ರಸ್ತೆಗೆ 3 ಕೋಟಿ ರೂ. ಬಿಡುಗಡೆಯಾಗಿದೆ. ಆ ಕಾಮಗಾರಿಗೂ ಶೀಘ್ರವೇ ಗುದ್ದಲಿಪೂಜೆ ನಡೆಸಲಾಗುತ್ತದೆ ಎಂದು ಭರವಸೆ ನೀಡಿದರು. ಲೋಕೋಪಯೋಗಿ ಸಚಿವ ಸತೀಶ್ ಜಾರಕೀಹೊಳಿ ಅವರ ಕಚೇರಿಗೆ ಬೇಲೂರಿನ ಸಮಗ್ರ ಅಭಿವೃದ್ಧಿ ಹಿತದೃಷ್ಟಿಯಿಂದ ಕನಿಷ್ಠ ನೂರಾರು ಬಾರಿ ಅರ್ಜಿ ಹಿಡಿದುಕೊಂಡು ಅಲೆದಿರುವೆ. ಅದರ ಫಲವಾಗಿ ಮಂತ್ರಿಗಳಿಂದ ಹೊಳೆಬೀದಿ ಅಭಿವೃದ್ಧಿಗೆ 35 ಕೋಟಿ ರೂ. ಅನುದಾನ ತರಲು ಸಾಧ್ಯವಾಗಿದೆ.

ಹಾಗೇಯೆ ಇನ್ನಿತರ ಕಾಮಗಾರಿಗಳನ್ನೂ ಮಾಡಲಾಗುತ್ತದೆ.

> ನಮ್ಮ ಶಾಸಕ ಹೆಚ್.ಕೆ.ಸುರೇಶ್ ಎರಡು ವರ್ಷಗಳಿಂದ ಕ್ಷೇತ್ರ ಅಭಿವೃದ್ಧಿಗಾಗಿ ಕಾಲಿಗೆ ಚಕ್ರ ಕಟ್ಟಿಕೊಂಡಂತೆ ಓಡಾಡುತ್ತಿದ್ದಾರೆ. ಕ್ಷೇತ್ರದಲ್ಲಿ ಭ್ರಷ್ಟಾಚಾರ ರಹಿತ ಆಡಳಿತಕ್ಕೆ ಮುನ್ನುಡಿ ಬರೆದಿದ್ದಾರೆ ಎಂದು ತಾಲ್ಲೂಕು ಪಂಚಾಯಿತಿ ಮಾಜಿ ಅಧ್ಯಕ್ಷ ಪರ್ವತಯ್ಯ ಶ್ಲಾಘಿಸಿದರು.

ಹೆಬ್ಬಾಳು ಗ್ರಾಮ ಇಡೀ ತಾಲ್ಲೂಕಿನಲ್ಲಿ ತನ್ನದೇ ಛಾಪು ಮೂಡಿಸಿದೆ. ಇಲ್ಲಿನ ನನೆಗುದಿಗೆ ಬಿದ್ದ ಸಮುದಾಯ ಭವನದ ಕಾಮಗಾರಿ ಹಾಗೂ ಚನ್ನಬಸವೇಶ್ವರ ದೇಗುಲ ಜೀರ್ಣೋದ್ಧಾರಕ್ಕೆ ಕೂಡ ಅನುದಾನ ಮತ್ತು ವೈಯಕ್ತಿಯವಾಗಿ ದೇಣಿಗೆ ನೀಡುತ್ತೇನೆ ಎಂದರು.

ತಾಲ್ಲೂಕು ಪಂಚಾಯಿತಿ ಮಾಜಿ ಅಧ್ಯಕ್ಷ ಪರ್ವತಯ್ಯ, ತಾಲ್ಲೂಕು ಶರಣ ಸಾಹಿತ್ಯ ಪರಿಷತ್ತು ಅಧ್ಯಕ್ಷ ಹೆಬ್ಬಾಳು ಹಾಲಪ್ಪ, ಗ್ರಾಮ ಪಂಚಾಯಿತಿ ಸದಸ್ಯರಾದ ಗಿರೀಶ್, ಧ್ರುವಕುಮಾರಿ, ಗೋಪಾಲ, ಪ್ರತಿಭಾತೀರ್ಥಕುಮಾರ್, ದೇವರಾಜ್, ಸೋಸೈಟಿ ಅಧ್ಯಕ್ಷ ಜಗದೀಶ್, ವಿದ್ಯುತ್ ಗುತ್ತಿಗೆದಾರ ಚಂದ್ರಶೇಖರಯ್ಯ, ಎಸ್‌ಎಂಸಿ ಅಧ್ಯಕ್ಷ ಸುಂದ್ರೇಶ್, ಪ.ರಾಮೇಗೌಡ, ಸಹಾಯಕ ಕಾರ್ಯಪಾಲಕ ಅಭಿಯಂತರ ದಯಾನಂದ್, ಸಹಾಯಕ ಇಂಜಿಯರ್ ಮಹೇಶ್, ಹೇಮಾಂತ್ ಇನ್ನು ಮುಂತಾದವರು ಹಾಜರಿದ್ದರು.

# ಇತಿಹಾಸದಲ್ಲಿ ಈ ದಿನ

## ಏಪ್ರಿಲ್ 22

### ಭಾರತೀಯ ಇತಿಹಾಸದಲ್ಲಿ

1. 1970 ಭೂಮಿ ದಿನ ( ):
ಭಾರತದಂತಹ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲೂ ಪರಿಸರ ಜಾಗೃತಿಗೆ ಪ್ರೇರಣೆ ನೀಡಿದ ದಿನ. ಭಾರತೀಯ ಪರಿಸರ ಚಟುವಟಿಕೆಗಳು ಈ ನಂತರ ಹೆಚ್ಚಿನ ಗಂಭೀರತೆಯನ್ನು ಪಡೆದವು.
2. 1993 ಸಮಾಜ ಸೇವಕ ಧನಂಜಯ ಕೀರ ನಿಧನರಾದರು:
ಮಹಾರಾಷ್ಟ್ರದ ಸಮಾಜ್‌ಸೇವಕ, ಗಾಂಧಿವಾದಿ ಮತ್ತು ಸಾಹಿತ್ಯಕರ್ತರು. ಅವರಿಗೆ ಪದ್ಮಭೂಷಣ ಪ್ರಶಸ್ತಿ ಲಭಿಸಿತ್ತು.

### ವಿಶ್ವ ಇತಿಹಾಸದಲ್ಲಿ

1. 1915 ಪ್ರಥಮ ವಿಶ್ವಯುದ್ಧದಲ್ಲಿ ಮೊಟ್ಟಮೊದಲ ಬಾರಿಗೆ ರಾಸಾಯನಿಕ ಆಯುಧಗಳ ಬಳಕೆ:
ಜರ್ಮನಿ, ಬೇಲ್ಜಿಯಂನ ಇಪ್ರೆಸ್ ಸಮರಭೂಮಿಯಲ್ಲಿ ಕ್ಲೋರಿನ್ ಗ್ಯಾಸ್ ಅನ್ನು ಬಳಸಿತು. ಇದು ಇತಿಹಾಸದಲ್ಲಿ ಸಾಮೂಹಿಕ ವಿನಾಶಕಾರಿ ಅಸ್ತ್ರ ಬಳಕೆಯ ಪ್ರಾರಂಭವಾಗಿತ್ತು.
2. 1970 ಪ್ರಥಮ ಭೂಮಿ ದಿನ ( ):
ಅಮೆರಿಕದ ಸೆನೆಟರ್ ಗೇಲೋರ್ಡ್ ನೆಲ್ಸ ನ್ ಈ ದಿನವನ್ನು ಪ್ರಾರಂಭಿಸಿದರು. ಇದು ಪರಿಸರ ಸಂರಕ್ಷಣೆಯ ಜಾಗೃತಿ ದಿನವಾಗಿದ್ದು, ಇಂದಿಗೂ 190 ಕ್ಕಿಂತ ಹೆಚ್ಚು ರಾಷ್ಟ್ರಗಳಲ್ಲಿ ಆಚರಿಸಲಾಗುತ್ತದೆ.
3. 2004 ಉತ್ತರ ಕೊರಿಯಾದ ರೈಲು ಸ್ಫೋಟ:
ಯೋರ್ಂಗ್‌ಚೆನ್ ಪಟ್ಟಣದಲ್ಲಿ ಸಂಭವಿಸಿದ ಈ ಸ್ಫೋಟದಲ್ಲಿ ನೂರಾರು ಜನರು ಸಾವನ್ನಪ್ಪಿದರು ಮತ್ತು ಸಾವಿರಾರು ಜನರಿಗೆ ಗಾಯವಾಯಿತು.

# ಇರುವುದೊಂದೇ ಭೂಮಿ, ಒಂದೇ ಅವಕಾಶ : ಇಂದು ವಿಶ್ವ ಭೂಮಿ ದಿನ

ಭೂಮಿ, ನಮ್ಮ ಏಕೈಕ ಗೃಹ, ಅದ್ಭುತವಾದ ಜೀವವೈವಿಧ್ಯ ಮತ್ತು ಸಂಪನ್ಮೂಲಗಳಿಂದ ಕೂಡಿದೆ. ಆದರೆ, ಮಾನವನ ಚಟುವಟಿಕೆಗಳಿಂದಾಗಿ ಇಂದು ಭೂಮಿಯು ಹಲವಾರು ಕಂಟಕಗಳನ್ನು ಎದುರಿಸುತ್ತಿದೆ. ಈ ಕಂಟಕಗಳು ಪರಿಸರ, ಜೀವವೈವಿಧ್ಯ, ಮತ್ತು ಮಾನವ ಜೀವನದ ಮೇಲೆ ಗಂಭೀರ ಪರಿಣಾಮ ಬೀರುತ್ತಿವೆ. ಈ ಲೇಖನದಲ್ಲಿ, ಭೂಮಿಯ ಮುಖ್ಯ ಸವಾಲುಗಳನ್ನು ಚರ್ಚಿಸಲಾಗಿದೆ.




### ಹವಾಮಾನ ಬದಲಾವಣೆ

ಹವಾಮಾನ ಬದಲಾವಣೆಯು ಭೂಮಿಯ ಅತಿದೊಡ್ಡ ಕಂಟಕಗಳಲ್ಲಿ ಒಂದಾಗಿದೆ. ಕೈಗಾರಿಕೀಕರಣ, ಇಂಧನ ದಹನ, ಮತ್ತು ಕಾಡುನಾಶದಿಂದಾಗಿ ಗ್ರೀನ್‌ಹೌಸ್ ಅನಿಲಗಳಾದ ಕಾರ್ಬನ್ ಡೈಆಕ್ಸೈಡ್, ಮೀಥೇನ್ ಮತ್ತು ನೈಟ್ರಸ್ ಆಕ್ಸೈಡ್‌ನ ಹೊರಸೂಸುವಿಕೆ ಹೆಚ್ಚಾಗಿದೆ. ಇದರಿಂದ ಜಾಗತಿಕ ತಾಪಮಾನ ಏರಿಕೆ, ಹಿಮನದಿಗಳ ಕರಗುವಿಕೆ, ಸಮುದ್ರ ಮಟ್ಟದ ಏರಿಕೆ, ಮತ್ತು ವಿಪರೀತ ಹವಾಮಾನ ಘಟನೆಗಳಾದ ಬರ, ಪ್ರವಾಹ, ಮತ್ತು ಚಂಡಮಾರುತಗಳು ಸಾಮಾನ್ಯವಾಗಿವೆ. ಇದು ಕೃಷಿ, ಆರೋಗ್ಯ, ಮತ್ತು ಆರ್ಥಿಕತೆಯ ಮೇಲೆ ದುಷ್ಪರಿಣಾಮ ಬೀರುತ್ತದೆ.

### ಕಾಡುಗಳ ನಾಶ

ಕಾಡುಗಳು ಭೂಮಿಯ ಶ್ವಾಸಕೋಶಗಳಾಗಿವೆ, ಆದರೆ ಕೃಷಿ, ಗಣಿಗಾರಿಕೆ, ಮತ್ತು ನಗರೀಕರಣಕ್ಕಾಗಿ ಅವುಗಳನ್ನು ವೇಗವಾಗಿ ನಾಶಪಡಿಸಲಾಗುತ್ತಿದೆ. ಅಮೆಜಾನ್, ಕಾಂಗೋ, ಮತ್ತು ಇಂಡೋನೇಷಿಯಾದಂತಹ ಉಷ್ಣವಲಯದ ಕಾಡುಗಳು ವಿಶೇಷವಾಗಿ ಅಪಾಯದಲ್ಲಿವೆ. ಕಾಡುನಾಶದಿಂದ ಜೀವವೈವಿಧ್ಯದ ಕ್ಷೀಣತೆ, ಇಂಗಾಲದ ಸಂಗ್ರಹಣೆಯ ಕಡಿಮೆಯಾಗುವಿಕೆ, ಮತ್ತು ಸ್ಥಳೀಯ ಸಮುದಾಯಗಳ ಜೀವನೋಪಾಯಕ್ಕೆ ಧಕ್ಕೆಯಾಗುತ್ತದೆ.

### ಪ್ಲಾಸ್ಟಿಕ್ ಮಾಲಿನ್ಯ

ಏಕ-ಬಳಕೆಯ ಪ್ಲಾಸ್ಟಿಕ್‌ಗಳಿಂದ ಸಮುದ್ರಗಳು, ನದಿಗಳು, ಮತ್ತು ಭೂಮಿಯು ಮಾಲಿನ್ಯಗೊಂಡಿವೆ. ಪ್ರತಿ ವರ್ಷ ಸುಮಾರು 300 ಮಿಲಿಯನ್ ಟನ್‌ಗಿಂತಲೂ ಹೆಚ್ಚು ಪ್ಲಾಸ್ಟಿಕ್ ತಯಾರಾಗುತ್ತದೆ, ಮತ್ತು ಇದರ ಗಣನೀಯ ಭಾಗವು ಪರಿಸರದಲ್ಲಿ ಸಂಗ್ರಹವಾಗುತ್ತದೆ. ಸಮುದ್ರ ಜೀವಿಗಳು ಪ್ಲಾಸ್ಟಿಕ್ ಸೇವನೆಯಿಂದ ಸಾಯುತ್ತಿವೆ, ಮತ್ತು ಮೈಕ್ರೊಪ್ಲಾಸ್ಟಿಕ್‌ಗಳು ಆಹಾರ ಸರಪಳಿಯಲ್ಲಿ ಸೇರಿಕೊಂಡು ಮಾನವ ಆರೋಗ್ಯಕ್ಕೆ ಅಪಾಯವನ್ನುಂಟುಮಾಡುತ್ತವೆ.

### ಜಲ ಕೊರತೆ ಮತ್ತು ಮಾಲಿನ್ಯ

ಶುದ್ಧ ನೀರಿನ ಕೊರತೆಯು ಜಾಗತಿಕ ಸಮಸ್ಯೆಯಾಗಿದೆ. ಕೈಗಾರಿಕೆಗಳಿಂದ ವಿಷಕಾರಿ ರಾಸಾಯನಿಕಗಳು, ಕೃಷಿಯಿಂದ ಕೀಟನಾಶಕಗಳು, ಮತ್ತು ಒಳಚರಂಡಿಯಿಂದ ನದಿಗಳು ಮತ್ತು ಸರೋವರಗಳು ಮಾಲಿನ್ಯಗೊಂಡಿವೆ. ಇದರಿಂದ ಕುಡಿಯುವ ನೀರಿನ ಕೊರತೆ, ಜಲಚರಗಳ ವಿನಾಶ, ಮತ್ತು ಆರೋಗ್ಯ ಸಮಸ್ಯೆಗಳು ಉಂಟಾಗಿವೆ. ಹೆಚ್ಚುವರಿಯಾಗಿ, ಅತಿಯಾದ ಭೂಗತ ಜಲದ ಬಳಕೆಯಿಂದ ಜಲಾಶಯಗಳು ಖಾಲಿಯಾಗುತ್ತಿವೆ.

### ಜೀವವೈವಿಧ್ಯದ ಕ್ಷೀಣತೆ

ಮಾನವ ಚಟುವಟಿಕೆಗಳಿಂದಾಗಿ ಪ್ರಾಣಿಗಳು ಮತ್ತು ಸಸ್ಯಗಳ ಜಾತಿಗಳು ವೇಗವಾಗಿ ನಾಶವಾಗುತ್ತಿವೆ. ಐಯುಸಿಎನ್ () ವರದಿಯ ಪ್ರಕಾರ, 40,000 ಕ್ಕೂ ಹೆಚ್ಚು ಜಾತಿಗಳು ಅಳಿವಿನಂಚಿನಲ್ಲಿವೆ. ಆವಾಸಸ್ಥಾನದ ನಾಶ, ಮಾಲಿನ್ಯ, ಮತ್ತು ಅಕ್ರಮ ಬೇಟೆಯಿಂದಾಗಿ ಚೀತಾಗಳು, ಆನೆಗಳು, ತಿಮಿಂಗಿಲಗಳು, ಮತ್ತು ಹಲವಾರು ಸಸ್ಯಗಳಂತಹ ಜಾತಿಗಳು ಅಪಾಯದಲ್ಲಿವೆ. ಜೀವವೈವಿಧ್ಯದ ಕ್ಷೀಣತೆಯಿಂದ ಆಹಾರ ಸರಪಳಿಗಳು ಮತ್ತು ಪರಿಸರ ವ್ಯವಸ್ಥೆಗಳ ಸಮತೋಲನ ಕೆಡುತ್ತದೆ.

### ಮಣ್ಣಿನ ಕ್ಷೀಣತೆ

ಕೃಷಿಯಲ್ಲಿ ರಾಸಾಯನಿಕ ಗೊಬ್ಬರಗಳು ಮತ್ತು ಕೀಟನಾಶಕಗಳ ಅತಿಯಾದ ಬಳಕೆ, ಕಾಡುನಾಶ, ಮತ್ತು ಮಣ್ಣಿನ ಸವೆತದಿಂದಾಗಿ ಭೂಮಿಯ ಫಲವತ್ತತೆ ಕಡಿಮೆಯಾಗುತ್ತಿದೆ. ಇದರಿಂದ ಆಹಾರ ಉತ್ಪಾದನೆಯ ಮೇಲೆ ಪರಿಣಾಮ ಬೀರುತ್ತದೆ, ವಿಶೇಷವಾಗಿ ಜನಸಂಖ್ಯೆ ಹೆಚ್ಚಿರುವ ದೇಶಗಳಲ್ಲಿ.

### ವಾಯು ಮಾಲಿನ್ಯ

ಕೈಗಾರಿಕೆಗಳು, ವಾಹನಗಳು, ಮತ್ತು ಇಂಧನ ದಹನದಿಂದಾಗಿ ವಾಯು ಮಾಲಿನ್ಯವು ಗಂಭೀರ ಸಮಸ್ಯೆಯಾಗಿದೆ. 2.5, 10, ಮತ್ತು ಓಝೋನ್‌ನಂತಹ ಕಲ್ಮಶಗಳು ಶ್ವಾಸಕೋಶದ ಕಾಯಿಲೆಗಳು, ಹೃದಯ ಸಮಸ್ಯೆಗಳು, ಮತ್ತು ಅಕಾಲಿಕ ಮರಣಕ್ಕೆ ಕಾರಣವಾಗುತ್ತವೆ. ಭಾರತದಂತಹ ದೇಶಗಳಲ್ಲಿ, ವಾಯು ಮಾಲಿನ್ಯವು ನಗರಗಳಲ್ಲಿ ಜೀವನದ ಗುಣಮಟ್ಟವನ್ನು ಕಡಿಮೆ ಮಾಡಿದೆ.

### ಪರಿಹಾರದ ದಾರಿಗಳು

ಈ ಕಂಟಕಗಳನ್ನು ಎದುರಿಸಲು ಒಗ್ಗಟ್ಟಿನ ಕ್ರಿಯೆ ಅಗತ್ಯವಾಗಿದೆ:

ನವೀಕರಿಸಬಹುದಾದ ಇಂಧನ: ಸೌರ, ಪವನ, ಮತ್ತು ಜಲವಿದ್ಯುತ್‌ನಂತಹ ಶುದ್ಧ ಇಂಧನಗಳಿಗೆ ಒತ್ತು ನೀಡುವುದು.

ವೃಕ್ಷಾರೋಪಣ: ಕಾಡುಗಳನ್ನು ಪುನರ್‌ಸ್ಥಾಪಿಸಲು ಜಾಗತಿಕ ಅಭಿಯಾನಗಳು.

ಪ್ಲಾಸ್ಟಿಕ್ ನಿಷೇಧ: ಏಕ-ಬಳಕೆಯ ಪ್ಲಾಸ್ಟಿಕ್‌ಗಳನ್ನು ಕಡಿಮೆ ಮಾಡುವುದು ಮತ್ತು ಮರುಬಳಕೆಗೆ ಒತ್ತು.

ಸುಸ್ಥಿರ ಕೃಷಿ: ಸಾವಯವ ಕೃಷಿ ಮತ್ತು ಮಣ್ಣಿನ ಸಂರಕ್ಷಣೆಯನ್ನು ಉತ್ತೇಜಿಸುವುದು.

ಜಾಗೃತಿ: ಶಿಕ್ಷಣ ಮತ್ತು ಸಾಮಾಜಿಕ ಮಾಧ್ಯಮದ ಮೂಲಕ ಪರಿಸರದ ಬಗ್ಗೆ ಅರಿವು ಮೂಡಿಸುವುದು.

### ಮುಂದೇನು

ಭೂಮಿಯ ಕಂಟಕಗಳು ಗಂಭೀರವಾಗಿದ್ದರೂ, ಸೂಕ್ತ ಕ್ರಮಗಳ ಮೂಲಕ ಇವುಗಳನ್ನು ಎದುರಿಸಬಹುದು. ಪರಿಸರ ಸಂರಕ್ಷಣೆಗಾಗಿ ವೈಯಕ್ತಿಕ, ಸಾಮಾಜಿಕ, ಮತ್ತು ಜಾಗತಿಕ ಮಟ್ಟದಲ್ಲಿ ಜವಾಬ್ದಾರಿಯುತ ಕ್ರಿಯೆಗಳು ಅಗತ್ಯವಾಗಿವೆ. ಭೂಮಿಯ ಸಂರಕ್ಷಣೆಯು ಕೇವಲ ಆಯ್ಕೆಯಲ್ಲ, ಬದಲಾಗಿ ಎಲ್ಲರ ಜವಾಬ್ದಾರಿಯಾಗಿದೆ. ಒಂದೇ ಭೂಮಿ, ಒಂದೇ ಅವಕಾಶ ಈ ಸತ್ಯವನ್ನು ಮನಗಂಡು, ಸುಸ್ಥಿರ ಭವಿಷ್ಯಕ್ಕಾಗಿ ಒಗ್ಗಿಕೊಡೋಣ.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248